**ಓ.ಎಸ್. ನಂ. 97/2022** **ಪಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 6.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 5 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಟಿ.ಜಿ.ಎಸ್ ವಕೀಲರಿಂದಃ</u>

1 ನೇ ಪ್ರತಿವಾದಿ ನನ್ನ ಬಾಮೈದ ಎಂದರೆ ಸರಿ. 6 ರಿಂದ 8 ನೇ ಪ್ರತಿವಾದಿಯರು ನನ್ನ ನಾದಿನಿಯರು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಬಾಮೈದನ ಹೆಂಡತಿ. ನಾನು 3 ನೇ ಪ್ರತಿವಾದಿಗೆ ಸೋದರ ಮಾವನಾಗಬೇಕು. ವಾದಿಯು ಸಹ ನನ್ನ ನಾದಿನಿಯಾಗಬೇಕು. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಾನು 9 ನೇ ತರಗತಿವರಿಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ರಾಜಕೀಯದಲ್ಲಿ ತೊಡಗಿರುತ್ತೇನೆ ಎಂದರೆ ಸರಿಯಲ್ಲ. ಕ್ರಯದ ಕರಾರುಪತ್ರ ಆಗಿದೆ ಎಂದು ಹೇಳುವ 2 ತಿಂಗಳ ಹಿಂದೆ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆಯು ಹೆಬ್ಬಲುಗುಪ್ಪೆಯ ವಾದಿಯ ಮನೆಯಲ್ಲಿ ಆಗಿರುತ್ತದೆ. ಸದರಿ ಮಾತುಕತೆಯಲ್ಲಿ ಊರಿನ ಯಜಮಾನರು ಒಬ್ಬರು, ಸಿದ್ದಲಿಂಗನಾಯಕ, ವಾದಿ ಮತ್ತು ಪ್ರತಿವಾದಿಯರು ಇದ್ದರು. ಸದರಿ ಸಿದ್ದಲಿಂಗನಾಯಕರವರು ಚಕ್ಕೂರು ಗ್ರಾಮದವರಾಗಿರುತ್ತಾರೆ. ಮಾತುಕತೆಯು ಬೆಳಿಗ್ಗೆ 11 ಗಂಟೆಯಲ್ಲಿ ಆಗಿರುತ್ತದೆ. ಮಾತುಕತೆಯಾದಾಗ ನಾನು ಹಾಜರಿರಲಿಲ್ಲ. ನನ್ನನ್ನು ಕರಾರುಪತ್ರಕ್ಕೆ ಸಹಿ ಮಾಡಲು ವಾದಿ ಕರೆದುಕೊಂಡು ಬಂದಿರುತ್ತಾರೆ. ಕರಾರುಪತ್ರ ಮಾಡುವ ಸಮಯದಲ್ಲಿ ಸಿದ್ದಲಿಂಗನಾಯಕ, ಇಟ್ನ ಗ್ರಾಮದ ರಾಮನಾಯಕ, ಅವರ ಹೆಂಡತಿ 8 ನೇ ಪ್ರತಿವಾದಿ ಚಿಕ್ಕದೇವಮ್ಮ, 6 ನೇ ಪ್ರತಿವಾದಿ ಕೆಂಚಮ್ಮ, ನಾನು, ವಾದಿ, 1 ನೇ ಪ್ರತಿವಾದಿ, ಆತನ ಮಗ ಹಾಜರಿದ್ದೆವು. ನೋಂದಣಿ ಕಛೇರಿಗೆ ಬೆಳಿಗ್ಗೆ 11.30 ಗಂಟೆಗೆ ಹೋಗಿರುತ್ತೇವೆ. ಕರಾರುಪತ್ರವನ್ನು ಮುರಳಿ ಎಂಬುವವರು ಬರೆದಿರುತ್ತಾರೆ. ಕಳೆದ 7 ವರ್ಷದಿಂದ ಭೋಗ್ಯಪತ್ರ ಹಾಗೂ ಆಧಾರಪತ್ರವನ್ನು ನೋಂದಣಿ ಮಾಡುತ್ತಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಸಾಲದ ಭದ್ರತೆಗಾಗಿ ಭೋಗ್ಯಪತ್ರವನ್ನು ಮಾಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಕರಾರುಪತ್ರವಾಗಿರುತ್ತದೆ ಎನ್ನುವರು. ಪ್ರತಿವಾದಿಗಳಿಗೆ ತಿಳಿಯದಂತೆ ನಾನು ಮತ್ತು ವಾದಿ ಸೇರಿ ಕರಾರುಪತ್ರವನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರುಪತ್ರಕ್ಕೆ ಸಾಕ್ಷಿದಾರನಾಗಿ ನಾನು, ಸಿದ್ದಲಿಂಗನಾಯಕ, ರಾಮನಾಯಕ, ಹೆಬ್ಬಲಗುಪ್ಪೆಯ ಯಜಮಾನರು ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ಸಬ್‌ರಿಜಿಸ್ಟ್ರಾರ್ ಕಛೇರಿ ಒಳಗೆ ಮಾಡಿರುತ್ತೇವೆ, ಆದರೆ ಸಬ್‌ರಿಜಿಸ್ಟ್ರರ್ ಮುಂದೆ ಮಾಡಿರುವುದಿಲ್ಲ. ಮೇಲೆ ಹೇಳಿದ ಎಲ್ಲರೂ ಸಬ್‌ರಿಜಿಸ್ಟ್ರಾರ್ ಸಹಿ ಮಾಡಿರುತ್ತೇವೆ. ಹಣವನ್ನು ವಾದಿಯು ಪ್ರತಿವಾದಿಯರಿಗೆ ಸಬ್‌ರಿಜಿಸ್ಟ್ರಾರ್ ಕಛೇರಿ ಒಳಗೆ ನೀಡಿರುತ್ತಾರೆ. ನನ್ನ ಸಮಕ್ಷಮ 5.30 ಲಕ್ಷ ಹಣವನ್ನು ನೀಡಲಾಗಿರುತ್ತದೆ. ಎಲ್ಲಾ ಹಣವು 1000 ರೂ ಮುಖಬೆಲೆಯದ್ದಾಗಿರುತ್ತದೆ. ನಮ್ಮ ಊರಿನಿಂದ ಹೆಚ್.ಡಿ.ಕೋಟೆಯು 15 ಕಿ.ಮೀ ದೂರವಿರುತ್ತದೆ. 2016 ರಲ್ಲಿ ನನ್ನ ಊರಾದ ಚಕ್ಕೂರಿನಲ್ಲಿ ಪ್ರತಿ ಎಕರೆ

ಜಮೀನು 3.40 ಲಕ್ಷ ಬೆಲೆ ಬಾಳುತ್ತಿತ್ತು. ಈಗ ನಮ್ಮ ಊರಿನಲ್ಲಿ ಪ್ರತಿ ಎಕರೆ ಜಮೀನಿಗೆ 15 ಲಕ್ಷ ಬೆಲೆ ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. 2016 ರಲ್ಲಿ ಚಕ್ಕೂರಿನಿನಲ್ಲಿ ಪ್ರತಿ ಎಕರೆ ಜಮೀನಿಗೆ 10 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ಹಣದ ಭದ್ರತೆಗಾಗಿ ಬೋಗ್ಯಪತ್ರ ಮಾಡಲು ಒಪ್ಪಿದ್ದು, ಆದರೆ ಸದರಿ ಸಮಯದಲ್ಲಿ ಬೋಗ್ಯಪತ್ರ ನೋಂದಣಿಯಾಗುತ್ತಿಲ್ಲವಾದ್ದರಿಂದ ವಾದಿಯರು ಕರಾರುಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ನನ್ನ ನಾದಿನಿಯಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಮತ್ತು ಪ್ರತಿವಾದಿಯರಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಅಂದರೆ 1 ನೇ ಪ್ರತಿವಾದಿಯ ತಂಗಿ ತೀರಿಕೊಂಡು 13 ವರ್ಷವಾಗಿರುತ್ತದೆ. ನಿಪಿ2 ಕರಾರುಪತ್ರದಲ್ಲಿ ನನ್ನ ಹೆಂಡತಿ ಕಾಣೆಯಾಗಿದ್ದು ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನನ್ನ ಹೆಂಡತಿ ತೀರಿಕೊಂಡಿದ್ದರೂ ಸಹ ಕಾಣೆಯಾಗಿರುತ್ತಾಳೆ ಎಂದು ನಿಪಿ2 ರಲ್ಲಿ ನಮೂದಿಸಿ ಸುಳ್ಳು ಕರಾರುಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.